# ಕರ್ನಾಟಕ ರಾಜ್ಯದಲ್ಲಿ ಸೌರ ನೀತಿ 2014-21 ರಂತೆ ಸೌರ ಘಟಕ ಮತ್ತು ಸೌರ ಪಾರ್ಕಗಳ ಹಂಚಿಕೆಯ ವಿಧಾನ

1. ಸ್ಪರ್ಧಾತ್ಮಕ ಬಿಡ್ ಮುಖೇನದಡಿ **(Competitive Bidding)**
2. ಮೂರನೇ ವ್ಯಕ್ತಿಯ ಮಾರಾಟ **(IPP-TPS)/** ಸ್ವಯಂ/ಸಮೂಹ ಬಳಕೆ **(Captive/Group Captive)**
3. ಖಾಸಗಿ ಸೌರ ಪಾರ್ಕ್

## ಸೌರ ನೀತಿ 2014-21 ರಂತೆ ಸೌರ ಘಟಕ ಮತ್ತು ಸೌರ ಪಾರ್ಕ‌ಗಳ ಹಂಚಿಕೆಯ ವಿಧಾನ ಮತ್ತು ಮಾನದಂಡಗಳು/ಮಾರ್ಗಸೂಚಿಗಳು:

ಕರ್ನಾಟಕ ಸರ್ಕಾರವು ಸೌರ ನೀತಿ 2014-21ನ್ನು ಜಾರಿಗೆ ತಂದಿದ್ದು ಸೌರ ಘಟಕಗಳಿಂದ 2020-21ನೇ ಇಸವಿಯೊಳಗಡೆ ಕನಿಷ್ಠ ಶೇ 8 ರಷ್ಟು ಸೌರ ನವೀಕರಿಸಬಹುದಾದ ಇಂಧನ ಖರೀದಿ ಬಾಧ್ಯತೆ (RPO - Solar Renewable Energy Purchase Obligation) ಗುರಿಯನ್ನು ತಲುಪುವ ನಿಟ್ಟಿನಲ್ಲಿ 6000ಮೆ.ವ್ಯಾ ಸಾಮರ್ಥ್ಯದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಗುರಿಯನ್ನು ಹೊಂದಿರುತ್ತದೆ.

ಸದರಿ ಸೋಲಾರ್ ಆರ್.ಪಿ.ಓ ವರ್ಗವನ್ನು ಒಳಗೊಂಡು ಸೌರ ನೀತಿಯಲ್ಲಿ ವಿವಿಧ ವರ್ಗಗಳಡಿ ಸ್ವಯಂ ಬಳಕೆ, ಸಮೂಹ ಬಳಕೆ, ಮೂರನೇ ವ್ಯಕ್ತಿ ಮಾರಾಟ, ಖಾಸಗಿ ಸೋಲಾರ್ ಪಾರ್ಕ್ ಹಾಗೂ ISTS ವರ್ಗಗಳಡಿ ಸೌರ ಘಟಕಗಳನ್ನು ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

RPO ಮಾರ್ಗದಡಿ ಟೆಂಡರ್ ಮೂಲಕ ಹಾಗೂ ಇನ್ನುಳಿದ ವರ್ಗದಡಿ ಏಕ ಕಡತ ಪದ್ದತಿ ಮುಖೇನ ಸೌರ ಯೋಜನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ.

1. **ಸ್ಪರ್ಧಾತ್ಮಕ ಬಿಡ್ ಮುಖೇನದಡಿ (Competitive Bidding):**
    - ವಿದ್ಯುತ್ ಸರಬರಾಜು ಕಂಪನಿಗಳ Solar RPO ಗುರಿಯನ್ನು ತಲುಪುವ ನಿಟ್ಟಿನಲ್ಲಿ ಸೌರ ವಿದ್ಯುತ್ ಖರೀದಿಗಾಗಿ ಕಾಲ ಕಾಲಕ್ಕೆ ಸರ್ಕಾರದ ಆದೇಶದ ಮೇರೆಗೆ ಕ್ರೆಡಲ್ ವತಿಯಿಂದ ಟೆಂಡರ್ ಆಹ್ವಾನಿಸಿ ಯಶಸ್ವಿ ಬಿಡ್ಡರುದಾರರಿಗೆ ಸೌರ ಘಟಕಗಳನ್ನು ಹಂಚಿಕೆ ಮಾಡಲಾಗುತ್ತಿತ್ತು.
    - ಹಂಚಿಕೆ ಪಡೆದ ಅಭಿವೃದ್ದಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ವಿದ್ಯುತ್ ಖರೀದಿ ಒಪ್ಪಂದ(PPA)ಗಳನ್ನು ಮಾಡಿಕೊಂಡು, ತದ ನಂತರ ಕೆ.ಇ.ಆರ್.ಸಿ ಯಿಂದ ಸದರಿ PPA ಗಳಿಗೆ ಅನುಮೋದನೆಗಳನ್ನು ಪಡೆಯಲಾಗುತ್ತದೆ.
    - ಟೆಂಡರ್ ನಲ್ಲಿ ನಿಗಧಿಪಡಿಸಿದ ಅವಧಿಯಂತೆ ಯೋಜನೆಯನ್ನು ಅನುಷ್ಠಾನಗೊಳಿಸಿದ ಪಕ್ಷದಲ್ಲಿ ಟೆಂಡರ್ ನಲ್ಲಿ ಕಂಡುಕೊಂಡ ದರದಂತೆಯೇ ವಿದ್ಯುತ್ ಸರಬರಾಜು ಕಂಪನಿಗಳಿಂದ ಅಭಿವೃದ್ಧಿದಾರರಿಗೆ ಉತ್ಪಾದಿಸಿದ ವಿದ್ಯುತ್ ಗೆ ಮೊತ್ತವನ್ನು ಪಾವತಿಸಲಾಗುವುದು.
    - ಸೋಲಾರ್ Renewable Energy Purchase Obligation (RPO) ಗುರಿಯನ್ನು ಈಗಾಗಲೇ ಸಾಧಿಸಿರುವುದರಿಂದ ಮಾನ್ಯ ಕೆ.ಇ.ಆರ್.ಸಿ ಆದೇಶದಂತೆ ಸಧ್ಯಕ್ಕೆ ಯಾವುದೇ ಟೆಂಡರ್ ನ್ನು ಆಹ್ವಾನ ಮಾಡಲಾಗುತ್ತಿಲ್ಲ.

2. **ಮೂರನೇ ವ್ಯಕ್ತಿಯ ಮಾರಾಟ (IPP-TPS) ಮತ್ತು ಸ್ವಯಂ/ಸಮೂಹ ಬಳಕೆ (Captive/Group Captive):**

ಸೌರ ನೀತಿ 2014-21 ರಲ್ಲಿ ಅವಕಾಶ ಕಲ್ಪಿಸಿದಂತೆ ವಿವಿಧ ವರ್ಗಗಳಡಿ ಸೌರ ಘಟಕಗಳ ಹಂಚಿಕೆಗಾಗಿ ಇಚ್ಚೆಯುಳ್ಳ ಅಭಿವೃದ್ಧಿದಾರರು ಕ್ರೆಡಲ್ ಸಂಸ್ಥೆಗೆ ಅರ್ಜಿಯನ್ನು ಸಲ್ಲಿಸುತ್ತಾರೆ.

ಕ್ರೆಡಲ್ ನಿಂದ ಸದರಿ ಅರ್ಜಿಯನ್ನು ಸೌರ ನೀತಿ 2014-21 ಮಾರ್ಗಸೂಚಿಯಂತೆ ಅರ್ಜಿಯನ್ನು ಪರೀಷ್ಕರಿಸಿ ಕಡತವನ್ನು ಹಂಚಿಕೆ ಆದೇಶಕ್ಕಾಗಿ ಇಂಧನ ಇಲಾಖೆಯ ಶಿಫಾರಸ್ಸಿನೊಂದಿಗೆ ಸನ್ಮಾನ್ಯ ಸಚಿವರಿಗೆ ಸಲ್ಲಿಸಲಾಗುತ್ತಿದೆ.

ವಿವರ ಈ ಕೆಳಗಿನಂತಿರುತ್ತದೆ.

**2.1 ಮೂರನೇ ವ್ಯಕ್ತಿಯ ಮಾರಾಟ (IPP -TPS)**

- ಸದರಿ ವರ್ಗಗಳಡಿ ಇಚ್ಚೆಯುಳ್ಳ ಅಭಿವೃದ್ಧಿದಾರರು ಕೆ.ಆರ್.ಇ.ಡಿ.ಎಲ್ ನ ವೆಬ್ ಸೈಟ್ ನಲ್ಲಿ ತಿಳಿಸಿರುವಂತೆ ನಿಗಧಿತ ನಮೂನೆಯಲ್ಲಿ ಈ ಕೆಳಗಿನ ಶುಲ್ಕ ಮತ್ತು ದಾಖಾಲಾತಿಗಳ ಜೊತೆಗೆ ಅರ್ಜಿ ಸಲ್ಲಿಸಬೇಕು.
- **ಅರ್ಜಿ ಶುಲ್ಕ:** ಪ್ರತಿ ಯೋಜನೆಗೆ ರೂ. 10,000/- +18% ಜಿ.ಎಸ್.ಟಿ.
- **ಸಂಸ್ಕರಣಾ ಶುಲ್ಕ:** ಪ್ರತಿ ಮೆ.ವ್ಯಾಗೆ ರೂ. 25,000/- +18% ಜಿ.ಎಸ್.ಟಿ.
- ಕಂಪನಿಯ AOA ಮತ್ತು MOA ಗಳು.
- **Net-Worth:** ಕಂಪನಿಯವರ ವಾರ್ಷಿಕ ನೆಟ್ ವರ್ತ್ ಕವಿನಿ ಆಯೋಗ ನಿಗಧಿಪಡಿಸಿರುವ ಬಂಡವಾಳ ವೆಚ್ಚದ ಶೇ 30 ರಷ್ಟು (ಅಂದರೆ ರೂ. 1.05 ಕೋಟಿ) ಹೊಂದಿರಬೇಕು ಇದಕ್ಕೆ ಸಂಬಂಧಿಸಿದಂತೆ ಕಂಪನಿಯ Balance Sheet ಮತ್ತು ವೆಬ್ ಸೈಟ್ ನಲ್ಲಿ ತಿಳಿಸಿರುವಂತೆ ನಿಗಧಿತ ನಮೂನೆಯಲ್ಲಿ Chartered Accountant ರಿಂದ ದೃಢೀಕೃತ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಸಂಭವನಿಯ ಯೋಜನಾ ವರದಿ/ವಿವರವಾದ ಯೋಜನಾ ವರದಿ (ಡಿ.ಪಿ.ಆರ್).
- ಖಾಸಗಿ ಜಮೀನಿನ ವಿವರಗಳು.

**2.2 ಸ್ವಯಂ ಬಳಕೆ ವರ್ಗ (Captive)**: ಮೂರನೆ ವ್ಯಕ್ತಿ ಮಾರಾಟದ ವರ್ಗದಡಿ ಹಂಚಿಕೆಯಾಗಿ ಸಲ್ಲಿಸಬೇಕಾದ ದಾಖಾಲಾತಿಯೊಂದಿಗೆ, ಆರ್.ಆರ್. ನಂಬರ್ ಮತ್ತು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸಬೇಕು.

**2.3 ಸಮೂಹ ಬಳಕೆ ವರ್ಗ (Group Captive):** ಮೂರನೆ ವ್ಯಕ್ತಿ ಮಾರಾಟದ ವರ್ಗದಡಿ ಹಂಚಿಕೆಯಾಗಿ ಸಲ್ಲಿಸಬೇಕಾದ ದಾಖಾಲಾತಿಯೊಂದಿಗೆ, ಉತ್ಪದನಾ ಕಂಪನಿಯಲ್ಲಿ ಕನಿಷ್ಠ ಶೇ.26 ರಷ್ಟು ಪಾಲುದಾರಿಕೆಯನ್ನು ಹೊಂದಿರಬೇಕು ಹಾಗೂ ಉತ್ಪಾದನೆಯಾದ ವಿದ್ಯುತ್ತಿನಲ್ಲಿ ಕನಿಷ್ಠ ಶೇ.51 ರಷ್ಟು ವಿದ್ಯುತ್ತನ್ನು ಬಳಕೆ ಮಾಡಿಕೊಳ್ಳಬೇಕು. ಈ ಕುರಿತಂತೆ Share Agreement/Share Pattern ನ್ನು ಸಲ್ಲಿಸಬೇಕು.

3. **ಖಾಸಗಿ ಸೌರ ಪಾರ್ಕ್:** ಸದರಿ ವರ್ಗದಡಿ ಇಚ್ಛೆಯುಳ್ಳ ಅಭಿವೃದ್ಧಿದಾರರು ಕೆ.ಆರ್.ಇ.ಡಿ.ಎಲ್ ನ ವೆಬ್ ಸೈಟ್ ನಲ್ಲಿ ತಿಳಿಸಿರುವಂತೆ ನಿಗಧಿತ ನಮೂನೆಯಲ್ಲಿ ಈ ಕೆಳಗಿನ ಶುಲ್ಕ ಮತ್ತು ದಾಖಾಲಾತಿಗಳ ಜೊತೆಗೆ ಅರ್ಜಿ ಸಲ್ಲಿಸಬೇಕು.

   - **ಅರ್ಜಿ ಶುಲ್ಕ:** ಪ್ರತಿ ಯೋಜನೆಗೆ ರೂ. 1,00,000/- +18% ಜಿ.ಎಸ್.ಟಿ.
   - **ಸಂಸ್ಕರಣಾ ಶುಲ್ಕ:** ಪ್ರತಿ ಮೆ.ವ್ಯಾಗೆ ರೂ. 25,000/- +18% ಜಿ.ಎಸ್.ಟಿ.
   - ಕಂಪನಿಯ AOA ಮತ್ತು MOA ಗಳು.
   - Net-Worth ಕಂಪನಿಯವರ ವಾರ್ಷಿಕ ನೆಟ್ ವರ್ತ್ ಯೋಜನಾ ವೆಚ್ಚದ ಶೇ 30 ರಷ್ಟು ಹೊಂದಿರಬೇಕು ಇದಕ್ಕೆ ಸಂಬಂಧಿಸಿದಂತೆ ಕಂಪನಿಯ Balance Sheet ಮತ್ತು ವೆಬ್ ಸೈಟ್ ನಲ್ಲಿ ತಿಳಿಸಿರುವಂತೆ ನಿಗಧಿತ ನಮೂನೆಯಲ್ಲಿ Chartered Accountant ರಿಂದ ದೃಢೀಕೃತ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
   - ಡಿ.ಪಿ.ಆರ್(Detailed Project Report)
   - ಭೂಮಿಯ ದಾಖಲೆಗಳು.

4. **ಯೋಜನಾ ಸಾಮರ್ಥ್ಯದ ಹೆಚ್ಚಳ ಪ್ರಸ್ತಾವನೆ:** ಮೂರನೇ ವ್ಯಕ್ತಿಯ ಮಾರಾಟ (IPP-TPS) ಮತ್ತು ಸ್ವಯಂ/ಸಮೂಹ ಬಳಕೆ (Captive/Group Captive) ವರ್ಗಗಳಡಿ ಹಂಚಿಕೆ ಪಡೆದ ಅಭಿವೃದ್ಧಿದಾರರು ಯೋಜನಾ ಸಾಮರ್ಥ್ಯದ ಹೆಚ್ಚಳಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಹಂಚಿಕೆಗಾಗಿ ಸಲ್ಲಿಸುವ ವಿಧಾನದಲ್ಲಿ ತಿಳಿಸಿರುವಂತೆ ಸಾಮರ್ಥ್ಯ ಹೆಚ್ಚಳಕ್ಕಾಗಿ ಅನ್ವಯಿಸುವ ಶುಲ್ಕಗಳನ್ನು ಮತ್ತು ಇನ್ನಿತರ ದಾಖಾಲಾತಿಗಳನ್ನು ಸಲ್ಲಿಸುತ್ತಾರೆ.
   ಕ್ರೆಡಲ್ ನಿಂದ ಸದರಿ ಅರ್ಜಿಯನ್ನು ಸೌರ ನೀತಿ 2014-21 ಮಾರ್ಗಸೂಚಿಯಂತೆ ಅರ್ಜಿಯನ್ನು ಪರೀಕ್ಷ್ಕರಿಸಿ ಕಡತವನ್ನು ಹಂಚಿಕೆ ಆದೇಶಕ್ಕಾಗಿ ಇಂಧನ ಇಲಾಖೆಯ ಶಿಫಾರಸ್ಸಿನೊಂದಿಗೆ ಸನ್ಮಾನ್ಯ ಸಚಿವರಿಗೆ ಸಲ್ಲಿಸಲಾಗುತ್ತಿದೆ.

**ಷರತ್ತುಗಳು:**

1. ತಾಲ್ಲೂಕುವಾರು 200ಮೆ.ವ್ಯಾ ಮಿತಿ: ಸೌರ ನೀತಿಯನ್ವಯ ಪ್ರತಿ ತಾಲ್ಲೂಕಿನ ಒಟ್ಟಾರೆ ವಿವಿಧ ವರ್ಗಗಳಡಿ (ಅಂದರೆ ಸ್ಪರ್ಧಾತ್ಮಕ ಬಿಡ್ ಮುಖೇನದಡಿ, ಮೂರನೆ ವ್ಯಕ್ತಿ ಮಾರಾಟ ವರ್ಗ/ಸ್ವಂತ ಬಳಕೆ ವರ್ಗ ಹಾಗೂ ಸೌರ ಪಾರ್ಕ್) ಸೌರ ಯೋಜನೆಗಳ ಹಂಚಿಕೆ ಸಾಮರ್ಥ್ಯವನ್ನು **200 ಮೆ.ವ್ಯಾಗೆ** ಸೀಮಿತಗೊಳಿಸಲಾಗಿದೆ. ಸದರಿ ತಾಲ್ಲೂಕುವಾರು ಹಂಚಿಕೆ ಪಟ್ಟಿ ವೆಬ್ ಸೈಟ್ ನಲ್ಲಿ ಲಭ್ಯವಿರುತ್ತದೆ. ಅಭಿವೃದ್ಧಿದಾರರು 200 ಮೆ.ವ್ಯಾ ಮೀರದ ತಾಲ್ಲೂಕುಗಳಲ್ಲಿ ಮೂರನೇ ವ್ಯಕ್ತಿ/ಸ್ವಂತ ಬಳಕೆ ಹಾಗೂ ಸೌರ ಪಾರ್ಕ್ ಸೌರ ಯೋಜನೆಗಳ ಹಂಚಿಕೆಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

2. **ಬ್ಯಾಂಕ್ ಗ್ಯಾರಂಟಿ**: ಹಂಚಿಕೆ ಪಡೆದ ಅಭಿವೃದ್ಧಿದಾರರು 45 ದಿನಗಳೊಳಗೆ ಪ್ರತಿ ಮೆ.ವ್ಯಾಗೆ **ರೂ. 5.00 ಲಕ್ಷಗಳಂತೆ (ಮೂರನೇ ವ್ಯಕ್ತಿ ಮಾರಾಟ (TPP-TPS), ಸ್ವಯಂ ಬಳಕೆ (Captive) ಹಾಗೂ ಖಾಸಗಿ ಸೌರ ಪಾರ್ಕ್)** ಬ್ಯಾಂಕ್ ಗ್ಯಾರಂಟಿಯನ್ನು ಸಲ್ಲಿಸಬೇಕು. ಯೋಜನೆಗಳು ಅನುಷ್ಠಾನಗೊಂಡನತರ ಬ್ಯಾಂಕ್ ಗ್ಯಾರಂಟಿಯನ್ನು ಅಭಿವೃದ್ಧಿದಾರರಿಗೆ ಹಿಂದಿರುಗಿಸಲಾಗುವುದು.

3. **ಯೋಜನಾ ಅನುಷ್ಠಾನದ ಅವಧಿ**: ಮೂರನೇ ವ್ಯಕ್ತಿಯ ಮಾರಾಟ (IPP-TPS) ಮತ್ತು ಸ್ವಯಂ/ಸಮೂಹ ಬಳಕೆ (Captive/Group Captive) ವರ್ಗಗಳಡಿ ಹಂಚಿಕೆ ಪಡೆದ ಘಟಕಗಳನ್ನು ಆದೇಶದ ದಿನಾಂಕದಿಂದ **18 ತಿಂಗಳುಗಳಲ್ಲಿ** ಅನುಷ್ಠಾನಗೊಳಿಸಬೇಕಾಗಿರುತ್ತದೆ. ತದನಂತರ ನಾಲ್ಕು ವರ್ಷಗಳವರೆಗೆ ಕಾಲಾವಧಿ ವಿಸ್ತರಣಾ ಶುಲ್ಕವನ್ನು ಪಾವತಿಸುವುದರ ಮೂಲಕ ಯೋಜನೆಯ ಅನುಷ್ಠಾನದ ಅವಧಿಯನ್ನು ವಿಸ್ತರಿಸಬಹುದಾಗಿದೆ.

4. ಖಾಸಗಿ ಸೌರ ಪಾರ್ಕ್ ಹಂಚಿಕೆ ಪಡೆದ ಅಭಿವೃದ್ಧಿದಾರರು ಹಂಚಿಕೆ ಆದೇಶದ ದಿನಾಂಕದಿಂದ **30 ತಿಂಗಳೊಳಗೆ** ಸಂಪೂರ್ಣ ಪಾರ್ಕ್ ನ್ನು ಮತ್ತು ಸೌರ ಘಟಕಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.

5. ಹಂಚಿಕೆ ಪಡೆದ ನಂತರ ಕೆ.ಪಿ.ಟಿ.ಸಿ.ಎಲ್ ನೊಂದಿಗೆ (Karnataka Power Transmission Corporation Limited) ಕೆ.ಇ.ಆರ್.ಸಿ ಮಾರ್ಗದರ್ಶನದನ್ವಯ Wheeling ಕರಾರನ್ನು ಮಾಡಿಕೊಳ್ಳಬೇಕು.

6. ಅಭಿವೃದ್ಧಿದಾರರು ಸೋಲಾರ್ ಘಟಕಗಳ ಅನುಷ್ಠಾನಕ್ಕಾಗಿ ಅವಶ್ಯವಿರುವ ಜಮೀನಿನ ಪರಿಭಾವಿತ ಭೂ ಪರಿವರ್ತನೆ ಅನುಮತಿಯನ್ನು ಪಡೆದುಕೊಳ್ಳಬೇಕು.

7. Ground Mounted Project ಗಳಿಗೆ ಸರ್ಕಾರದಿಂದ ಯಾವುದೇ ಸಹಾಯಧನ ಲಭ್ಯವಿರುವುದಿಲ್ಲ.

**ಅನುಬಂಧಗಳು**

1. ಅರ್ಜಿ ಮಾದರಿ - ಅನುಬಂಧ - 1.
2. ನೆಟ್ ವರ್ತ್ - ಅನುಬಂಧ - 2.
3. ಶುಲ್ಕಗಳ ವಿವರ - ಅನುಬಂಧ - 3.

**ಹಂಚಿಕೆ ಆದೇಶದ ಪ್ರಸ್ತಾವನೆಯನ್ನು ಹೊರತುಪಡಿಸಿ ಇನ್ನಿತಿರ ಪ್ರಸ್ತಾವನೆಗಳು:**

1. **ಯೋಜನಾ ಅನುಷ್ಠಾನದ ಕಾಲಾವಧಿ ವಿಸ್ತರಣಾ ಪ್ರಸ್ತಾವನೆ (Time Extension):** ಮೂರನೇ ವ್ಯಕ್ತಿಯ ಮಾರಾಟ (IPP-TPS) ಮತ್ತು ಸ್ವಯಂ/ಸಮೂಹ ಬಳಕೆ (Captive/Group Captive) ವರ್ಗಗಳಡಿ ಹಂಚಿಕೆ ಪಡೆದ ಘಟಕಗಳನ್ನು ಆದೇಶದ ದಿನಾಂಕದಿಂದ **18 ತಿಂಗಳುಗಳಲ್ಲಿ** ಅನುಷ್ಠಾನಗೊಳಿಸಬೇಕಾಗಿರುತ್ತದೆ. ತದನಂತರ ನಾಲ್ಕು ವರ್ಷಗಳವರೆಗೆ ಕಾಲಾವಧಿ ವಿಸ್ತರಣಾ ಶುಲ್ಕವನ್ನು ಪಾವತಿಸುವುದರ ಮೂಲಕ ಯೋಜನೆಯ ಅನುಷ್ಠಾನದ ಅವಧಿಯನ್ನು ವಿಸ್ತರಿಸಬಹುದಾಗಿದೆ.

   ಜಿ.ಎಸ್.ಟಿ ಹೊರತುಪಡಿಸಿ ಕಾಲಾವಧಿ ವಿಸ್ತರಣಾ ಶುಲ್ಕಗಳ ವಿವರ (ರೂ ಗಳಲ್ಲಿ):

| | |
|---|---|
| ಮೊದಲನೇ ವರ್ಷ | 1,00,000/- |
| ಎರಡನೇ ವರ್ಷ | 2,00,000/- |
| ಮೂರನೇ ವರ್ಷ | 3,00,000/- |
| ನಾಲ್ಕನೇ ವರ್ಷ | 5,00,000/- |
| ನಾಲ್ಕನೇ ವರ್ಷದ ನಂತರ ಯೋಜನೆಯನ್ನು ರದ್ದುಗೊಳಿಸಲಾಗುವುದು | |

   ಅಭಿವೃದ್ಧಿದಾರರು ಕಾಲಾವಧಿ ವಿಸ್ತರಣೆಗಾಗಿ ಯೋಜನೆಯ ಅನುಷ್ಠಾನದ ಪ್ರಗತಿಯ ವರದಿಯೊಂದಿಗೆ ಕ್ರೆಡಲ್ ಸಂಸ್ಥೆಗೆ ಮನವಿಯನ್ನು ಸಲ್ಲಿಸುತ್ತಾರೆ. ಕ್ರೆಡಲ್ ನಿಂದ ಸದರಿ ಮನವಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಆದೇಶಕ್ಕಾಗಿ ಸಲ್ಲಿಸಲಾಗುವುದು.

2. **ಯೋಜನಾ ವರ್ಗಾವಣೆ**: ಹಂಚಿಕೆ ಪಡೆದ ಅಭಿವೃದ್ಧಿದಾರರು ಮತ್ತೊಂದು ಕಂಪನಿಗೆ ವರ್ಗಾಯಿಸಲು ಪ್ರತಿ ಮೆ.ವ್ಯಾ ಗೆ ರೂ.1,50,000/- (+ 18% ಜಿ.ಎಸ್.ಟಿ)ರಂತೆ ವರ್ಗಾವಣೆ ಶುಲ್ಕದೊಂದಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಕ್ರೆಡಲ್ ನಿಂದ ಸದರಿ ಮನವಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಆದೇಶಕ್ಕಾಗಿ ಸಲ್ಲಿಸಲಾಗುವುದು. (Change in CIN Number)

3. **ಕಂಪನಿಯ ಹೆಸರು ಬದಲಾವಣೆ/ಪಾಲುದಾರಿಕೆ ಸಂಸ್ಥೆಯಿಂದ ಕಂಪನಿ ಬದಲಾವಣೆ:** ಹಂಚಿಕೆ ಪಡೆದ ಅಭಿವೃದ್ಧಿದಾರು ಕಂಪನಿ ಹೆಸರು ಬದಲಾವಣೆಗೆ ಪ್ರತಿ ಮೆ.ವ್ಯಾ ಗೆ ರೂ.10,000/- (+ 18% ಜಿ.ಎಸ್.ಟಿ)ರಂತೆ ಹೆಸರು ಬದಲಾವಣೆ ಶುಲ್ಕದೊಂದಿಗೆ ಕ್ರೆಡಲ್ ಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಕ್ರೆಡಲ್ ನಿಂದ ಸದರಿ ಮನವಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಆದೇಶಕ್ಕಾಗಿ ಸಲ್ಲಿಸಲಾಗುವುದು.

4. **ವರ್ಗಗಳಲ್ಲಿ ಬದಲಾವಣೆ:** ವಿವಿಧ ವರ್ಗಗಳಡಿ ಹಂಚಿಕೆ ಪಡೆದ ಅಭಿವೃದ್ಧಿದಾರರು ವರ್ಗಗಳ ಬದಲಾವಣೆಗಾಗಿ ಮನವಿಯನ್ನು ಸಲ್ಲಿಸುತ್ತಾರೆ. ಕ್ರೆಡಲ್ ನಿಂದ ಸದರಿ ಮನವಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಆದೇಶಕ್ಕಾಗಿ ಸಲ್ಲಿಸಲಾಗುವುದು.

ಶುಲ್ಕ ರೂಗಳಲ್ಲಿ (+ 18% ಜಿ.ಎಸ್.ಟಿ)

| ಕ್ರಮ ಸಂಖ್ಯೆ | ವರ್ಗ | ಅರ್ಜಿ ಶುಲ್ಕ (ಪ್ರತಿ ಅರ್ಜಿ ಗೆ) | ಸಂಸ್ಕರಣಾ ಶುಲ್ಕ (ಪ್ರತಿ ಮೆ.ವ್ಯಾ ಗೆ) | ಬ್ಯಾಂಕ್ ಗ್ಯಾರಂಟಿ (ಪ್ರತಿ ಮೆ.ವ್ಯಾ ಗೆ) | ನೆಟ್ ವರ್ತ್ (ಪ್ರತಿ ಮೆ.ವ್ಯಾ ಗೆ) | ಅನುಷ್ಠಾನದ ಅವಧಿ |
|---|---|---|---|---|---|---|
| 1 | ಸ್ಪರ್ಧಾತ್ಮಕ ಬಿಡ್ ಮುಖೇನದಡಿ (Competitive Bidding) | 10,000 | 1,00,000 | 10,00,000 | ಕವಿನಿ ಆಯೋಗ ನಿಗಧಿಪಡಿಸಿರುವ ಬಂಡವಾಳ ವೆಚ್ಚದ ಶೇ 30 ರಷ್ಟು | ಟೆಂಡರ್ ನಲ್ಲಿ ನಿಗದಿಪಡಿಸಿದಂತೆ |
| 2 | ಮೂರನೇ ವ್ಯಕ್ತಿಯ ಮಾರಾಟ (IPP-TPS) | 10,000 | 25,000 | 5,00,000 | ಕವಿನಿ ಆಯೋಗ ನಿಗಧಿಪಡಿಸಿರುವ ಬಂಡವಾಳ ವೆಚ್ಚದ ಶೇ 30 ರಷ್ಟು | ಹಂಚಿಕೆ ಆದೇಶದ ದಿನಾಂಕದಿಂದ 18ತಿಂಗಳು |
| 3 | ಸ್ವಯಂ/ಸಮೂಹ ಬಳಕೆ (Captive/Group Captive) | 10,000 | 25,000 | 5,00,000 | ಕವಿನಿ ಆಯೋಗ ನಿಗಧಿಪಡಿಸಿರುವ ಬಂಡವಾಳ ವೆಚ್ಚದ ಶೇ 30 ರಷ್ಟು | ಹಂಚಿಕೆ ಆದೇಶದ ದಿನಾಂಕದಿಂದ 18ತಿಂಗಳು |
| 4 | ಖಾಸಗಿ ಸೌರ ಪಾರ್ಕ್ | 1,00,000 | 25,000 | 5,00,000 | ಯೋಜನಾ ವೆಚ್ಚದ ಶೇ 30 ರಷ್ಟು | ಹಂಚಿಕೆ ಆದೇಶದ ದಿನಾಂಕದಿಂದ 30ತಿಂಗಳು |